ವಿಷಯ:- ಆದಾಯ ಪ್ರಮಾಣ ಘೋಷಿಸಲು ನಮೂನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 528 (1181)

ಶ್ರೀ ಯು.ಆರ್.ಸಭಾಪತಿ, (ಉಡುಪಿ):- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರವು ಪ್ರವರ್ಗ ಎ, ಬಿ, ಸಿಗೆ ನಿಗದಿತ ನಮೂನೆಯಲ್ಲಿ ಆದಾಯ ಘೋಷಣೆ ಮಾಡಿ ಸಂಬಂಧಿತ ಪ್ರಾಧಿಕಾರದಿಂದ ಆದಾಯ ಪ್ರಮಾಣ ಪತ್ರವನ್ನು ಪಡೆಯುವ ಅವಕಾಶ ಇರುವುದು ನಿಜವಲ್ಲವೇ?

ಆ) ಸಾಮಾನ್ಯ ವರ್ಗದ ಅಭ್ಯರ್ಥಿಗಳು ಆದಾಯವನ್ನು ಘೋಷಣೆ ಮಾಡಿಕೊಳ್ಳಲು ಯಾವ ನಮೂನೆಯಲ್ಲಿ ಆದಾಯ ಪ್ರಮಾಣ ಪತ್ರವನ್ನು ಪಡೆಯಬೇಕು (ವಿವರ ನೀಡುವುದು)

ಶ್ರಿ ಮಾಲೀಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ಉಡುಪಿ - ಮಲ್ಪೆ ನಗರ ಯೋಜನಾ ಪ್ರಾಧಿಕಾರದಲ್ಲಿ ಪೂರ್ಣಕಾಲಿಕ ಸಹಾಯಕ ನಿರ್ದೇಶಕರ ಹುದ್ದೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 529 (1180)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ - ಮಲ್ಪೆ ನಗರ ಯೋಜನಾ ಪ್ರಾಧಿಕಾರದಲ್ಲಿ ಪೂರ್ಣಕಾಲಿಕ ನಿರ್ದೇಶಕರ ಹುದ್ದೆ ಎಷ್ಟು ಸಮಯದಿಂದ ಖಾಲಿ ಇದೆ.

ಆ) ಪ್ರಭಾರ ವ್ಯವಸ್ಥೆಯಲ್ಲಿ ಸಹಾಯಕ ನಿರ್ದೇಶಕರು ದಿನಂಪ್ರತಿ ಕಛೇರಿಗೆ ಹಾಜರಾಗದಿರುವುದರಿಂದ ಕಡತಗಳ ವಿಲೇವಾರಿ ಆಗದೆ ಮತ್ತು ಸಾರ್ವಜನಿಕರಿಗೆ ಅಧಿಕಾರಿಯ ಸೇವೆ ಲಭ್ಯವಾಗದೆ ಇರುವುದರಿಂದ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

ಇ) ವಿಲೇವಾರಿಗಾಗಿ ಬಾಕಿ ಇರುವ ಕಡತಗಳು ಎಷ್ಟು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಉಡುಪಿ - ಮಲ್ಪೆ ನಗರ ಯೋಜನಾ ಪ್ರಾಧಿಕಾರದಲ್ಲಿ ಪೂರ್ಣಕಾಲಿಕ ನಿರ್ದೇಶಕರ ಹುದ್ದೆ ಯಾವುದೂ ಇಲ್ಲ. ಆದರೆ ನಗರ ಯೋಜನಾ ಸಹಾಯಕ ನಿರ್ದೇಶಕರ ಹುದ್ದೆ ದಿನಾಂಕ 9-3-1991ರಿಂದ ಖಾಲಿ ಇರುತ್ತದೆ.

ಆ) ಈ ಸಮಸ್ಯೆಯನ್ನು ಸಧ್ಯದಲ್ಲಿಯೇ ಬಗೆಹರಿಸಲಾಗುವುದು. ನಗರ ಯೋಜನಾ ಇಲಾಖೆಯಲ್ಲಿ 10 ಕಿರಿಯನಗರ ಯೋಜಕರಿಗೆ ನಗರ ಯೋಜನಾ ಸಹಾಯಕ ನಿರ್ದೇಶಕರಾಗಿ ಮುಂಬಡ್ತಿ ನೀಡಲು ತೀರ್ಮಾನಿಸಿದ್ದು, ಉಡುಪಿ - ಮಲ್ಪೆ ಯೋಜನಾ ಪ್ರಾಧಿಕಾರಕ್ಕೆ ಒಬ್ಬ ಪೂರ್ಣಾವಧಿಯ ನಗರ ಯೋಜನಾ ಸಹಾಯಕ ನಿರ್ದೇಶಕರನ್ನು ಸಧ್ಯದಲ್ಲಿಯೇ ನೇಮಕ ಮಾಡಲಾಗುವುದು.

ಇ) ವಿಲೇವಾರಿಗಾಗಿ 59 ಕಡತಗಳು ಬಾಕಿ ಇವೆ.

ವಿಷಯ:- ರಾಜ್ಯದಲ್ಲಿರುವ ಭಿಕ್ಷುಕರ ಪುನರ್ ವಸತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 530 (659)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭಿಕ್ಷುಕರ ಪುನರ್ವಸತಿ ಕೇಂದ್ರಗಳು ಎಷ್ಟು? ಇವುಗಳು ಎಲ್ಲಿವೆ?

ಆ) ಪ್ರತಿ ಕೇಂದ್ರದಲ್ಲಿರುವ ಭಿಕ್ಷುಕರ ಸಂಖ್ಯೆ ಎಷ್ಟು?

ಇ) ಭಿಕ್ಷುಕರ ಪುನರ್ವಸತಿ ಕಾರ್ಯಕ್ರಮಕ್ಕಾಗಿ 1994-95 ಮತ್ತು 1995-96ರಲ್ಲಿ ಮೀಸಲಿಟ್ಟ ಹಣವೆಷ್ಟು?

ಈ) ಭಿಕ್ಷಾಟನೆ ತಪ್ಪಿಸಲು ರಾಜ್ಯ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ರಾಜ್ಯದಲ್ಲಿ ಈ ಕೆಳಕಂಡ 10 ಸ್ಥಳಗಳಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಸದರಿ ಕೇಂದ್ರಗಳಲ್ಲಿನ ಭಿಕ್ಷುಕರ ವಿವರಗಳನ್ನು ಕೆಳಗೆ ನೀಡಲಾಗಿದೆ:-

ಕ್ರ. ಸಂ.	ಕೇಂದ್ರದ ವಿವರ	ನಿರಾಶ್ರಿತರ ಸಂಖ್ಯೆ
1.	ಬೆಂಗಳೂರು	330
2.	ಮಂಗಳೂರು	20
3.	ಮೈಸೂರು	80
4.	ಶಿವಮೊಗ್ಗ	35